# ಮನದೊಳಗಿನ ಕಿಚ್ಚು

ಡಾ. ಸ್ವಾಮಿನಾಥ ಅಯ್ಯರ್ ತಮಿಳುನಾಡಿನ ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರು; ತಮಿಳು ಭಾಷೆಯ ಪ್ರಾಚೀನ ಗ್ರಂಥ ಸಂಪಾದನೆಗಾಗಿ ಬದುಕನ್ನೇ ಮೀಸಲಾಗಿಟ್ಟವರು. ಅವರ ಕೆಲವು ಸ್ವಾರಸ್ಯವಾದ ಬರೆಹಗಳನ್ನು ಡಾ. ಬಿ.ಜಿ.ಎಲ್. ಸ್ವಾಮಿಯವರು 'ಅರಳಿದ ಮೊಲ್ಲೆ ಮತ್ತು ಇತರ ಪ್ರಬಂಧಗಳು' ಎಂಬ ಶೀರ್ಷಿಕೆಯಲ್ಲಿ ಕನ್ನಡಕ್ಕೆ ಅನುವಾದಿಸಿ, ಸಂಕಲಿಸಿದ್ದಾರೆ. ಅವುಗಳಲ್ಲಿ 'ಅಸೂಯೆಯ ಬೆಂಕಿ' ಎಂಬುದೊಂದು ಹೃದಯ ವಿದ್ರಾವಕ ಘಟನೆಯನ್ನೊಳಗೊಂಡ ಪ್ರಸಂಗ ಕಥನ. ಅದರ ಸಂಗ್ರಹ ರೂಪ ಹೀಗಿದೆ:

ತಂಜಾವೂರು ಸಂಸ್ಥಾನ ಕಲಾವಿದರಿಗೆ– ಮುಖ್ಯವಾಗಿ ಸಂಗೀತಗಾರರಿಗೆ– ಆಶ್ರಯ ನೀಡುತ್ತಿದ್ದ ಕಾಲದಲ್ಲಿ ಕಾಳಹಸ್ತಿ ಅಯ್ಯರ್ ಎಂಬ ವೀಣಾ ವಿದ್ವಾಂಸರಿದ್ದರು, ವೀಣಾ ವಾದನದಲ್ಲಿ ಅವರದು ಅಕ್ಷರಶಃ ಅದ್ವಿತೀಯ ಪಾಂಡಿತ್ಯ. ಹೀಗಾಗಿ ಪ್ರತಿದಿನವೂ ಅರಸರು ಪೂಜೆ ಮಾಡುತ್ತಿರುವಾಗ ವೀಣೆ ನುಡಿಸುವ ವಿಶೇಷ ಗೌರವ ಅವರದಾಗಿತ್ತು. ಅರಸರಿಗೆ ಅವರ ವೀಣಾ ವಾದನ ಅತ್ಯಂತ ಇಷ್ಟವಾಗುತ್ತಿತ್ತು. ಅಯ್ಯರ್ ಅವರಲ್ಲಿ ತನ್ನನ್ನು ಮೀರಿಸುವ ವೀಣಾ ವಿದ್ವಾಂಸ ಇಡೀ ರಾಜ್ಯದಲ್ಲಿ ಇನ್ನೊಬ್ಬರಿಲ್ಲ ಎಂಬ ಅಹಂಕಾರ ಹೆಡೆಯಾಡುತ್ತಿತ್ತು. ತಮ್ಮ 'ಅನನ್ಯತೆ'ಯನ್ನು ಕಾಪಾಡಿಕೊಳ್ಳುವ ಸಲುವಾಗಿ, ತಮ್ಮ ವಿದ್ಯೆಯನ್ನು ಯಾರಿಗೂ ಕಲಿಸದೇ, ತಮ್ಮಲ್ಲಿಯೇ ಜೋಪಾನವಾಗಿ ಇರಿಸಿಕೊಂಡಿದ್ದರು. ಒಮ್ಮೆ ಅವರಿಗೆ ವೀಣಾ ವಾದನಕ್ಕಾಗಿ ಮೈಸೂರಿನ ಅರಸರಿಂದ ಆಮಂತ್ರಣ ಬಂದುದರಿಂದ, ಅವರು ಕೆಲವು ದಿನಗಳ ಮಟ್ಟಿಗೆ ಮೈಸೂರಿಗೆ ಹೋಗಬೇಕಾಯಿತು. ಎಂದಿನಂತೆ ತಂಜಾವೂರಿನ ಅರಸರು ಮಾಡುವ ಪೂಜೆಯ ವೇಳೆ ಬೇರೊಬ್ಬರು ವೀಣೆಯನ್ನು ನುಡಿಸಿದರು. ಅದು ಅಯ್ಯರ್ ಅವರ ವೀಣಾ ನಾದಕ್ಕಿಂತ ಮೋಹಕವಾಗಿತ್ತು. ಆ ದಿವ್ಯ ನಾದ ಅರಸರನ್ನು ಆಕರ್ಷಿಸಿತು. ಕುತೂಹಲದಿಂದ ವಿಚಾರಿಸಿದಾಗ ಈ ಹೊಸ ವೈಣಿಕ ಕಾಳಹಸ್ತಿ ಅಯ್ಯರ್ ಅವರ ಮಗನೆಂದು ತಿಳಿದು, ಅರಸರಿಗೆ ಇನ್ನಷ್ಟು ಸಂತಸವಾಯಿತು. ಆದರೆ, ಮೈಸೂರಿನಿಂದ ಹಿಂದಿರುಗಿದ ಅಯ್ಯರ್ ಅವರಿಗೆ ತನ್ನ ಮಗ ತನ್ನನ್ನೇ ಮೀರಿಸಿರುವ ಸಂಗತಿ ಇಷ್ಟವಾಗಲಿಲ್ಲ! ಮಾತ್ರವಲ್ಲ; ಅವರಲ್ಲಿ ತಡೆಯಲಾರದಷ್ಟು ಈರ್ಷ್ಯೆಯನ್ನುಂಟು ಮಾಡಿತು! ತಾನು ಕಲಿಸದೇ, ತನ್ನ ಮಗ ಸ್ವಪ್ರಯತ್ನದಿಂದ ವೀಣಾ ವಾದನವನ್ನು ಕಲಿತು, ರಾಜರ ಪ್ರಶಂಸೆಗೆ ಪಾತ್ರವಾದ ಸಂಗತಿಯನ್ನು ಅವರಿಗೆ ಜೀರ್ಣಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಮಗನನ್ನು ಅಭಿನಂದಿಸುವ ನೆಪದಲ್ಲಿ ಅವರು ಆತನನ್ನು ಬಿಗಿಯಾಗಿ ತಬ್ಬಿ ಹಿಡಿದು, ಆತನ ನಡು ಬೆರಳನ್ನು ಕಚ್ಚಿ ತುಂಡುಮಾಡಿ, ತಮ್ಮ ಮಾತ್ಸರ್ಯವನ್ನು ತಣಿಸಿಕೊಂಡರು.

ಇದು ಮಹಾಭಾರತದಲ್ಲಿ ಬರುವ ಏಕಲವ್ಯನ ಕಥೆಯಂತೆ ಮಾತ್ಸರ್ಯದ ಕರಾಳ ರೂಪವನ್ನು ತೋರಿಸುವ ಒಂದು ದಾರುಣ ಪ್ರಸಂಗ. ಅಲ್ಲಿ ಅರ್ಜುನನ ಅಸೂಯೆಯ ಪರಿಣಾಮವಾಗಿ ಏಕಲವ್ಯ ಬಿಲ್ಲುಗಾರಿಕೆಗೆ ಅತ್ಯಗತ್ಯವಾಗಿದ್ದ ಹೆಬ್ಬೆರಳನ್ನೇ ಕಳೆದುಕೊಂಡ. ಇಲ್ಲಿ ಸ್ವಂತ ತಂದೆಯ ಹೊಟ್ಟೆಕಿಚ್ಚಿನ ಫಲವಾಗಿ ಮಗ ವೀಣೆಯನ್ನು ನುಡಿಸಲು ಮುಖ್ಯವಾಗಿ ಬೇಕಾಗಿದ್ದ ನಡುಬೆರಳನ್ನೇ ಕಳೆದುಕೊಂಡ. ಇದು ಮಾತ್ಸರ್ಯ ಹುಟ್ಟುಹಾಕುವ ಕ್ರೌರ್ಯದ ಉತ್ಕಟ ಸ್ಥಿತಿ. ಗಮನಿಸಬೇಕಾದ ಸಂಗತಿ ಎಂದರೆ– ಅಸೂಯೆ, ಈರ್ಷ್ಯೆ, ಮಾತ್ಸರ್ಯ, ಹೊಟ್ಟೆಕಿಚ್ಚು ಎಂದೆಲ್ಲಾ ಗುರುತಿಸಲ್ಪಡುವ ಈ ಕರಾಳ ಗುಣ ಪ್ರಾಯಃ ಮನುಷ್ಯನಿಗೆ ಮಾತ್ರ ಸೀಮಿತ ಆಗಿರುವಂಥದು. ಅರಿಷಡ್ವರ್ಗಗಳ ಪಟ್ಟಿಯಲ್ಲಿ ಮಾತ್ಸರ್ಯಕ್ಕೂ ಒಂದು ಸ್ಥಾನ ನೀಡಿದ್ದಾರೆ ನಮ್ಮ ಹಿರಿಯರು. ಈ ಗುಣ ಮನುಷ್ಯರೆಲ್ಲರಲ್ಲೂ ಇರುವಂಥದೇ. ತಿಳಿವಳಿಕೆಯುಳ್ಳ ವ್ಯಕ್ತಿಗಳು ಅದನ್ನು ಪ್ರಜ್ಞಾಪೂರ್ವಕವಾಗಿ ನಿಯಂತ್ರಿಸುತ್ತಾರೆ; ಇನ್ನು ಕೆಲವರು ಅದನ್ನು ಸಂಪೂರ್ಣವಾಗಿ ನಿಗ್ರಹಿಸುತ್ತಾರೆ. ಆದರೆ ಕೆಲವರಲ್ಲಿ ಅದು ಅನಿಯಂತ್ರಿತವಾಗಿ ಸದಾಕಾಲ ಹೊಗೆಯಾಡುತ್ತಲೇ ಇರುತ್ತದೆ. ಆತ್ಮ ಕೇಂದ್ರಿತ ವ್ಯಕ್ತಿಗಳಲ್ಲಿ ಈರ್ಷ್ಯೆ ಅತ್ಯಂತ ತೀವ್ರ ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತಿರುತ್ತದೆ. ಅಂಥವರು ತಮ್ಮ ಅಸೂಯೆಯನ್ನು ಮರೆಮಾಚುವ ಸಲುವಾಗಿ, ಅದಕ್ಕೆ ಬೇರೊಂದು ಬಣ್ಣ, ಆಕೃತಿ ಕೊಡುವುದೂ ಉಂಟು. ಉದಾಹರಣೆ ಕೊಡುವುದಾದರೆ, ಪಾಂಡವರ ಬಗೆಗಿನ ತನ್ನ ದಾಯಾದಿ ಮಾತ್ಸರ್ಯವನ್ನು ದುರ್ಯೋಧನ 'ಛಲ'ವೆಂದು ಕರೆದು ತನ್ನನ್ನು ಸಮರ್ಥಿಸಿಕೊಳ್ಳುತ್ತಿದ್ದನಂತೆ. 'ನೆಲ ಕಿರಿವನೆಂದು ಬಗೆದಿರ? ಛಲ ಕಿರಿವೆಂ!' (ನಾನು ರಾಜ್ಯದ ಆಸೆಯಿಂದ ಯುದ್ಧ ಮಾಡುತ್ತಿಲ್ಲ; ಛಲಕ್ಕಾಗಿ ಯುದ್ಧ ಮಾಡುತ್ತೇನೆ) ಎನ್ನುತ್ತಾನೆ ಪಂಪ ಚಿತ್ರಿಸಿದ ದುರ್ಯೋಧನ. ಆದರೆ ಆ 'ಛಲ'ದ ಹಿಂದಿರುವ ಮುಖ್ಯ ಪ್ರೇರಣೆ ಪಾಂಡವರ ಬಗೆಗೆ ದುರ್ಯೋಧನನಲ್ಲಿದ್ದ ತೀವ್ರ ಮಾತ್ಸರ್ಯವೆಂಬುದು ಸುಸ್ಪಷ್ಟ. ತನಗಿಂತ ಇನ್ನೊಬ್ಬರು ಯಾವುದೇ ರೀತಿಯಲ್ಲಿ ಮೇಲೆ ಬರಬಾರದು; ತನಗಿಲ್ಲದ ಸಂತೋಷ ಇನ್ನೊಬ್ಬನಿಗೆ ಇರಬಾರದು– ಇಂಥ ಅನ್ನಿಸಿಕೆಗಳು ಮನುಷ್ಯನಲ್ಲಿ ಮೂಡಿಬರುವುದು ಮಾತ್ಸರ್ಯದ ಪರಿಣಾಮದಿಂದಲೇ.

ಅಸೂಯೆ ಎಂಬುದು ವ್ಯಕ್ತಿಯ ಮನಸ್ಸಿನಲ್ಲಿ ಹುಟ್ಟಿ, ಆತನನ್ನು ಸದಾಕಾಲ ತಪ್ತಸ್ಥಿತಿಯಲ್ಲಿಯೇ ಇರುಸುವಂಥ ಒಂದು ವಿಕಾರ. ಬತ್ತದ ಹೊಟ್ಟಿನ ರಾಶಿಯಲ್ಲಿರುವ ಒಂದು ಕಿಡಿ, ನಿಧಾನವಾಗಿ ಇಡೀ ರಾಶಿಯನ್ನೇ ಸುಟ್ಟು ಬೂದಿ ಮಾಡುವಂತೆ, ಹೊಟ್ಟೆಕಿಚ್ಚಿನ ಕಿಡಿ ಅದಕ್ಕೆ ಆಶ್ರಯಕೊಟ್ಟ ಮನುಷ್ಯನನ್ನೂ ದಹಿಸುತ್ತದೆ. ಆದ್ದರಿಂದಲೇ ಬಸವಣ್ಣನವರು 'ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ, ನೆರಮನೆಯ ಸುಡುವುದೇ?' ಎಂದು ಪ್ರಶ್ನಿಸಿರುವುದು.

■ ವೈನತೇಯ

## ಮಾತೇ ಮುತ್ತು

★ ಪತ್ರಿಕೆಗಳ ಅಭಿಪ್ರಾಯ, ಸಾರ್ವಜನಿಕ ಅಭಿಪ್ರಾಯ ಯಾವಾಗಲೂ ಒಂದೇ ಎಂದುಕೊಳ್ಳುವುದು ಮೂಢತನ.

-ಜೋಸೆಫ್ ಕೋವನ್

★ ಪಶ್ಚಾತ್ತಾಪಪಟ್ಟ ಪಾಪಿ, ಎಂದೂ ತಪ್ಪು ಮಾಡದ ಹತ್ತು ಮಂದಿ ಋಷಿಗಳಿಗಿಂತ ಲೇಸು.

-ರಷ್ಯಾ ಗಾದೆ

★ ಪ್ರತಿಜ್ಞೆ ಕೇಳಿ ಮನುಷ್ಯನನ್ನು ನಂಬುವುದಿಲ್ಲ, ಮನುಷ್ಯನನ್ನು ನೋಡಿ ಪ್ರತಿಜ್ಞೆ ನಂಬುತ್ತೇವೆ.

-ಈಸ್ಕೈಸ್

★ ಮಾತೇ ಮಾತು, ಕೃತಿಗೆ ತೂತು! ಸುಖವು ಸಾಧ್ಯವೇ?

-ಆನಂದಕಂದ

★ ಗಂಡು ಹೆಣ್ಣು ಜೀವನದ ಎರಡು ಮುಖಗಳು. ಇವರೀರ್ವರಲ್ಲಿ ಯಾರೂ ಶ್ರೇಷ್ಠ, ಕನಿಷ್ಠರಲ್ಲ. ಒಬ್ಬೊರಿಗೊಬ್ಬರು ಅನುಸರಿಸಬೇಕು.

-ಸಂಚಿ ಹೊನ್ನಮ್ಮ

★ ಅದೃಷ್ಟವು ಪ್ರತಿಕೂಲವಾಗಿದ್ದರೂ, ತಿಳಿದವನು ತಾನು ಮಾಡಬೇಕಾದ ಕೆಲಸವನ್ನು ಮಾಡಲೇಬೇಕು. ತನ್ನ ತಪ್ಪನ್ನು ಕಳೆದುಕೊಳ್ಳಲಿಕ್ಕೆ ಹಾಗೂ ತನ್ನ ಮನಸ್ಸನ್ನು ಸಮಾಧಾನ ಮಾಡಿಕೊಳ್ಳಲಿಕ್ಕಾದರೂ ಮಾಡಲೇಬೇಕು.

-ಪಂಚತಂತ್ರ

★ ಶ್ರದ್ಧೆಗಿಂತ ಸಂದೇಹವೇ ಮನುಷ್ಯನ ಮನಸ್ಸಿನ ಮೂಲಧರ್ಮ. ಸಂದೇಹ ನಿವಾರಣೆಯಾಗದ ಹೊರತು ಕ್ಷೇಮವಿಲ್ಲ. ನೇಮವಿಲ್ಲದೆ ಸಂದೇಹವನ್ನು ಹತ್ತಿಕ್ಕುವುದು ಕೊನೆಗೂ ಸಾಧ್ಯವಿಲ್ಲ.

-ಗೌರೀಶ ಕಾಯ್ಕಿಣಿ

★ ಒಬ್ಬ ವ್ಯಕ್ತಿಯ ಬದುಕಿನಲ್ಲಿ ಗುರುತಿಸಬಹುದಾದ ಅತಿ ಸುಂದರ ಭಾಗವೆಂದರೆ, ಆತನು ಕೀರ್ತಿಗಾಗಲೀ, ಹೊಗಳಿಕೆಗಾಗಲೀ ಆಸೆ ಪಡದೆ ಕೇವಲ ಪ್ರೀತಿಯಿಂದ ಮಾಡಿ ಮುಗಿಸುವ ಅತ್ಯಂತ ಸಣ್ಣಪುಟ್ಟ ಕೆಲಸಗಳು.

-ವಿಲಿಯಂ ವರ್ಡ್ಸ್‌ವರ್ತ್

★ ದುರಾಸೆಯನ್ನು ಕೈಬಿಟ್ಟರೆ ನಿಮ್ಮ ಸಂಪತ್ತು ವೃದ್ಧಿಸುತ್ತದೆ.

-ಪ್ಲೇಟೋ

★ ಬೆಳಕಿನಲ್ಲಿ ಬೆಳಕಿಗೆ ಬೆಲೆಯಿಲ್ಲ! ಆದರೆ, ಕತ್ತಲೆಯಲ್ಲಿ ಕಿರುದೀಪಕ್ಕೂ ಹಿರಿದಾದ ಬೆಲೆಯುಂಟು.

-ಅನಾಮಿಕ

★ ಶ್ರದ್ಧೆಯಿಂದ ಕೆಲಸ ಮಾಡುವವರು ಮಹತ್ವದ ವಿಜಯ ಸಾಧಿಸಬಲ್ಲರು.

-ಎಮರ್‌ಸನ್

★ ಈ ಜಗತ್ತು ಒಂದು ಏಣಿಯಿದ್ದಂತೆ; ಏಣಿ ಹಿಡಿದು ಕೆಲವರು ಮೇಲೇರುತ್ತಾರೆ, ಕೆಲವರು ಕೆಳಗಿಳಿಯುತ್ತಾರೆ.

-ಇಟಲಿ ಗಾದೆ

★ 'ಬಿದ್ದಾಗ' ಮತ್ತು 'ಎದ್ದಾಗ' ಗಾಂಭೀರ್ಯದಿಂದ ನಡೆದುಕೊಳ್ಳುವುದನ್ನು ಕಲಿಯಿರಿ. ದೇವರ ಕೃಪೆ ನಿಮಗೆ ಖಂಡಿತವಾಗಿಯೂ ಲಭಿಸುತ್ತದೆ.

-ವಿಲಿಯಂ ಥ್ಯಾಕರೆ